ದಿನಾಂಕ 05-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯ ಪರ ಶ್ರೀ ಎಂ.ಎಂ.ಎಂ ವಕೀಲರಿಂದಃ**

1. ನಾನು ಹಾಜರುಪಡಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಇರುವ ಸಂಗತಿಗಳನ್ನು ಪ್ರತಿವಾದಿಯು ಮಾಹಿತಿ ನೀಡಿ ಬರೆಸಿರುತ್ತಾರೆ. ಸದರಿ ಕಾರಣಕ್ಕೆ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ-1 ರ ಭಕ್ಷೀಸು ಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ನಾನು ನ್ಯಾಯಾಲಯದಲ್ಲಿ ಹಲವರ ಮೇಲೆ ಸಲ್ಲಿಸಿರುವ ಪ್ರಕರಣಗಳ ಪೈಕಿ ಕೆಲವು ಪ್ರಕರಣಗಳು ತೀರ್ಮಾನಗೊಂಡಿದ್ದು, ಕೆಲವು ಪ್ರಕರಣಗಳು ಬಾಕಿ ಇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ದೇವಸ್ಥಾನದ ಮಲಂಗ ಹಸನೈನ್ ಪಂಚ ಕಮಿಟಿಯ ಅಧ್ಯಕ್ಷನಿದ್ದಾಗ ಕೆಲವು ಪ್ರಕರಣಗಳನ್ನು ಸಲ್ಲಿಸಿದ್ದೆ ಎಂದು ನುಡಿಯುತ್ತಾರೆ.

2. ಮೇಲ್ಮನವಿ ಸಂಃ 14/2014 ರ ಪ್ರಕರಣವನ್ನು ನಾನು ಖಾದರ್ ಸಾಬ್ ಪಟ್ಟಿಗಾರ ರವರ ಮೇಲೆ ಸಲ್ಲಿಸಿದ್ದು, ಅದು ವಜಾ ಆಗಿರುತ್ತದೆ ಎಂದರೆ ಸರಿ. ಅದೇ ರೀತಿ ಮಾನ್ಯ ಹೆಚ್ಚುವರಿ ಹಿರಿಯ ನ್ಯಾಯಾಧೀಶರು ಹಾನಗಲ್ಲ ರವರಲ್ಲಿ ನಾನು ಅದೇ ವ್ಯಕ್ತಿ ವಿರುದ್ಧ ಸಿವಿಲ್ ರಿವಿಜನ್ ಅರ್ಜಿ ಸಂಃ 1/2019 ರ ಪ್ರಕರಣವು ಬಾಕಿ ಇದೆ ಎಂದರೆ ಸರಿ. ಅದೇ ರೀತಿ ಬಸವರಾಜ ತಂದೆ ರಾಮಣ್ಣ ವಡ್ಡರ ರವರ ವಿರುದ್ಧ ನಾನು ಮಾನ್ಯ ಹಿರಿಯ ನ್ಯಾಯಾಲಯ ಹಾನಗಲ್ಲ ರವರಲ್ಲಿ ಚೆಕ್ ಬೌನ್ಸ ಪ್ರಕರಣವನ್ನು ಸಲ್ಲಿಸಿದ್ದು, ಅದು ಪ್ರಸ್ತುತ ತೀರ್ಮಾನವಾಗಿರುತ್ತದೆ ಎಂದರೆ ಸರಿ. ಅದೇ ರೀತಿ ನನ್ನ ಮತ್ತು ಇತರರ ವಿರುದ್ಧ ಮಾನ್ಯ ಹಿರಿಯ ನ್ಯಾಯಾಲಯ, ಹಾನಗಲ್ಲನಲ್ಲಿ ಕ್ರಿಮಿನಲ್ ಮೊಕದ್ದಮೆ ಸಂಃ 12/2007 ಬಾಕಿ ಇದೆ ಎಂದರೆ ಸರಿ.

3. ನಾನು ಪ್ರಕರಣಗಳಲ್ಲಿ ಸಾಕ್ಷಿಯನ್ನು ನುಡಿಯುವುದು ಮತ್ತು ವಿನಾ ಕಾರಣಕ್ಕೆ ಸುಳ್ಳು ಪ್ರಕರಣವನ್ನು ಸಲ್ಲಿಸುವ ಪ್ರವೃತ್ತಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಮಾತ್ರ ಸಾಕ್ಷಿ ನುಡಿದಿದ್ದು ಇತರರ ಪ್ರಕರಣಗಳಲ್ಲಿ ನನಗೆ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಈ ಪ್ರಕರಣ ದಲ್ಲಿಯೂ ಸಹ ಪ್ರತಿವಾದಿಯ ಪರವಾಗಿ ಸುಳ್ಳು ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ



ಇರುವ ಸಂಗತಿಗಳೆಲ್ಲವೂ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ಜೊತೆಗೆ ನಾನು ಒಳ್ಳೇಯ ಬಾಂಧವ್ಯ ಇರುವುರಿಂದ ಆತನ ನಿರ್ದೇಶನದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನ, ವಾದಿ ಮತ್ತು ಆಕೆಯ ಮಗಳು ಉಪನೋಂದಣಾಧಿಕಾರಿಗಳ ಕಛೇರಿಗೆ ಹೋಗಿದ್ದೆವು ಮತ್ತು ಭಕ್ಷೀಸು ಪತ್ರವನ್ನು ಬರೆಯಲು ವಾದಿ ಮತ್ತು ಆಕೆಯ ಮಗಳು ಮಾಹಿತಿ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ-1 ರ  ಭಕ್ಷೀಸು ಪತ್ರಕ್ಕೆ ವಾದಿ, ಪ್ರತಿವಾದಿ ಮತ್ತು ಅದಕ್ಕೆ ಸಾಕ್ಷಿದಾರರೆಂದು ವಾದಿಯ ಮಗಳು ಹಾಗೂ ಪ್ರಶಾಂತ ಎಂಬುವವರು ಸಹಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ-1 ರ ಭಕ್ಷೀಸು ಪತ್ರವನ್ನು ಬರೆದುಕೊಟ್ಟ ನಂತರ ಪ್ರತಿವಾದಿಯು ದರ್ಗಾಕ್ಕೆ ಬಂದು ದಾವಾ ಆಸ್ತಿಯ ಸ್ವಾದೀನವನ್ನು ನೀನೇ ಇಟ್ಟುಕೋ ಎಂದು ಹೇಳಿದ್ದಳೆಂದು ಸುಳ್ಳು ಬರೆಸಿದ್ದೇನೆ ಎಂದರೆ  ಸರಿಯಲ್ಲ. ಅದೇ ರೀತಿ ನಮ್ಮ ಸಮ್ಮುಖದಲ್ಲಿ ಭಕ್ಷೀಸು ಪತ್ರದ ಆಧಾರದ ಮೇಲೆ ದಾವಾ ಆಸ್ತಿಯ ದಾಖಲೆಗಳನ್ನು ಬದಲಾಯಿಸಿಕೊಳ್ಳುವಂತೆ ವಾದಿಯು ಪ್ರತಿವಾದಿಗೆ ತಿಳಿಸಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**SD/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ